# ಬುತ್ತಿ ಚಿಗುರು

## ಡಾಕ್ಟರ್ ಸರ್ಟಿಫಿಕೇಟ್

ಕಲ್ಲೇಶಿ ಆರೋಗ್ಯ ಸರಿಯಿಲ್ಲ ಎಂದು ಹತ್ತು ದಿನ ರಜೆ ಹಾಕಿದ್ದ. ಹತ್ತನೇ ತರಗತಿಯ ಕೊನೆಯ ದಿನಗಳಾಗಿದ್ದರಿಂದ ಶಾಲೆಯಲ್ಲಿ ಕಟ್ಟುನಿಟ್ಟಿನ ತರಬೇತಿ ನಡೆದಿತ್ತು. ಸಕಾರಣವಿಲ್ಲದೆ ಯಾರೂ ರಜೆ ಹಾಕುವಂತಿರಲಿಲ್ಲ. ಹೀಗಾಗಿ, ಅಷ್ಟು ದಿನ ರಜೆ ಹಾಕಿದ್ದಕ್ಕೆ ಡಾಕ್ಟರ್ ಸರ್ಟಿಫಿಕೇಟ್ ತರಲೇಬೇಕೆಂದು ಟೀಚರ್ ಹೇಳಿದರು. ಮಾರನೇ ದಿನ ಕಲ್ಲೇಶಿ ಖಾಲಿ ಕೈಯಿಂದ ಬಂದ. 'ಬರುವಾಗ ಡಾಕ್ಟರ್ ಸರ್ಟಿಫಿಕೇಟ್ ತರಬೇಕು ಅಂತ ಹೇಳಿದ್ದೆ ಅಲ್ವಾ?' ಎಂದರು ಟೀಚರ್. ಕಲೇಶಿ, 'ನಾನು ಎಷ್ಟು ಕೇಳಿದರೂ ಅವರು ಕೊಡ್ಲಿಲ್ಲ ಮೇಡಂ. ಅದು ಅವ್ರು ಕಷ್ಟಪಟ್ಟು ಓದಿ ತೆಗೆದುಕೊಂಡಿರುವುದಂತೆ, ಕೊಡೊಲ್ಲ ಹೋಗೋ ಅಂದ್ರು!' ಎಂದ.

**ಅನುಪಮಾ ವಸ್ತದ್**





## ಗೋಡಂಬಿ ರೇಟು

'ನಿಮ್ಮ ಅಂಗಡಿಯಲ್ಲಿ ಗೋಡಂಬಿ ಒಂದು ಕೇಜಿಗೆ ಎಷ್ಟು?' ಎಂದು ಕೇಳಿದ ರಮೇಶ. ಅಂಗಡಿಯ ಶೆಟ್ಟರು, 'ಏಳುನೂರು ರೂಪಾಯಿ ಕಣಪ್ಪ ಕೇಜಿಗೆ' ಎಂದರು. ರಮೇಶ, 'ಅಲ್ರೀ, ಹಿಂದಿನ ಬೀದಿ ರಂಗಪ್ಪನ ಅಂಗಡೀಲಿ ಐನೂರು ರೂಪಾಯಿಗೆ ಕೇಜಿ ಅಂದರಲ್ಲಾ, ನಿಮ್ಮಲ್ಲಿ ಯಾಕೆ ಅಷ್ಟು ಜಾಸ್ತಿ ಬೆಲೆ?' ಎಂದಾಗ, ಶೆಟ್ಟರು ಸಿಟ್ಟಾಗಿ, 'ಅಲ್ಲೇ ತೊಗೊಳ್ಳೋದಲ್ವಾ? ಮತ್ಯಾಕೆ ಇಲ್ಲಿ ಬಂದೆ?' ಎಂದರು. ರಮೇಶ, 'ಅವರಲ್ಲಿ ಈಗ ಗೋಡಂಬಿ ಸ್ಟಾಕ್ ಇಲ್ಲವಂತೆ' ಎಂದ. ಶೆಟ್ಟರು, 'ಓಹೊ ಹೌದಾ? ನಮ್ಮಲ್ಲೂ ಗೋಡಂಬಿ ಸ್ಟಾಕ್ ಇಲ್ಲದಿದ್ದಾಗ, ಬೆಲೆ ಕೇವಲ ನಾನೂರು ರೂಪಾಯಿ ಅಷ್ಟೇ ಇರುತ್ತೆ... ಸ್ಟಾಕ್ ಇದ್ದಾಗ ಮಾತ್ರ ಏಳುನೂರು!' ಎಂದರು.

**ವಿ.ವಿಜಯೇಂದ್ರ ರಾವ್**